KATK010000032021

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ.2/2021**

ಪ್ರಾ.ಸಾ. ಃ **2**

ದೋ.ಸಾ. ಃ **2**

ದಿ.**01.07.2025.**

ಹೆಸರು ಃ ಸುನಿಲ್ ಕುಮಾರ್

ತಂದೆಯ ಹೆಸರು ಃ ಗಂಗಾಧರಯ್ಯ

ವಯಸ್ಸು ಃ **46** ವರ್ಷ

ಉದ್ಯೋಗ ಃ ವಿಷಯ ಪರಿವೀಕ್ಷಕರು, ಡಿಡಿಪಿಐ ಕಚೇರಿ, ತುಮಕೂರು

ವಾಸಸ್ಥಳ ಃ ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ಕಳೆದ ಐದೂವರೆ ವರ್ಷಗಳಿಂದ ನಾನು ಡಿಡಿಪಿಐ ಕಚೇರಿಯಲ್ಲಿ ವಿಷಯ ಪರಿವೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿ.19.09.2020 ರಂದು ನಮ್ಮ ಕಚೇರಿಯ ಉಪ ನಿರ್ದೇಶಕರು ನನ್ನನ್ನು ಬೆಳಿಗ್ಗೆ 10.15 ಗಂಟೆಗೆ ಕರೆದು, ಗಾಂಜಾ ಪ್ರಕರಣದಲ್ಲಿ ಗಾಂಜಾ ಅಮಾನತ್ತುಪಡಿಸಿಕೊಳ್ಳುವ ಬಗ್ಗೆ ಪತ್ರಾಂಕಿತ ಅಧಿಕಾರಿಯಾಗಿ ಸಿಇಎನ್ ಪೋಲೀಸ್ ಠಾಣೆಗೆ ಹೋಗಲು ನನಗೆ ತಿಳಿಸಿದರು. ಆ ಬಗ್ಗೆ ನನಗೆ ಜ್ಞಾಪನ ಪತ್ರವನ್ನು ನೀಡಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ9 ಎಂದು ಗುರುತಿಸಲಾಯಿತು.
3. ನನಗೆ ವಿಷಯ ತಿಳಿದ ತಕ್ಷಣ ನಾನು ಸಿಇಎನ್ ಪೋಲೀಸ್ ಠಾಣೆಗೆ ಹೋಗಿ ವರದಿ ಮಾಡಿಕೊಂಡೆನು. ಆ ಸಮಯದಲ್ಲಿ ಠಾಣೆಯಲ್ಲಿ ಪೋಲೀಸ್ ಉಪ ನಿರೀಕ್ಷಕರಾದ ಶ್ರೀಮತಿ ಶಮೀನ್, ಪೋಲೀಸರು, ಸಾಕ್ಷಿದಾರರಾದ ನಂಜುಂಡಶರ್ಮ, ಹರೀಶ್ ಮತ್ತು ರವೀಶ್ ಚಂದ್ರ ಇದ್ದರು. ರವೀಶ್ ಚಂದ್ರ ರವರು ಕಾನೂನು ಮಾಪನ

ಶಾಸ್ತ್ರ ಇಲಾಖೆಗೆ ಸಂಬಂಧಪಟ್ಟವರಾಗಿದ್ದರು. ಅವರು ಬರುವಾಗ ಡಿಜಿಟಲ್ ಮಾಪನ ಯಂತ್ರವನ್ನು ತಂದಿದ್ದರು. ಗಾಂಜಾ ಪ್ರಕರಣದಲ್ಲಿ ಪಂಚನಾಮೆಗೆ ಸಹಕರಿಸಬೇಕೆಂದು ಶ್ರೀಮತಿ ಶಮೀನ್ ರವರು ನಮಗೆ ತಿಳಿಸಿದರು. ಅದಕ್ಕೆ ನಾವು ಒಪ್ಪಿಕೊಂಡೆವು.

4. ನಂತರ ನಮ್ಮನ್ನು ಪೋಲೀಸ್ ಜೀಪಿನಲ್ಲಿ ಕೊರಟಗೆರೆ-ಬೆಂಗಳೂರು ರಸ್ತೆಯ ಉರ್ಡಿಗೆರೆಯ ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನದ ಎದುರಿಗೆ ಕರೆದುಕೊಂಡು ಹೋದರು. ಅಲ್ಲಿ ಒಬ್ಬ ವ್ಯಕ್ತಿಯನ್ನು ಪೋಲೀಸರು ಹಿಡಿದುಕೊಂಡಿದ್ದರು. ಆ ಸ್ಥಳ ಅಮ್ಮದ್ ಖಾನ್ ವಾಸ ಇರುವ ಕಾಂತಣ್ಣನವರಿಗೆ ಸೇರಿದ ಬಾಡಿಗೆ ಮನೆಯ ಮುಂದುಗಡೆ ಆಗಿತ್ತು. ನಾನು ಪತ್ರಾಂಕಿತ ಅಧಿಕಾರಿಯಾಗಿದ್ದು, ಪೋಲೀಸರು ಹಿಡಿದುಕೊಂಡಿದ್ದ ವ್ಯಕ್ತಿಯ ಅಂಗಶೋಧನೆ ಮಾಡಲು ನಾನೇ ಅಂಗಶೋಧನೆ ಮಾಡಬಹುದೇ ಅಥವಾ ಬೇರೆಯವರನ್ನು ಕರೆಸಬೇಕೆ ಎಂದು ಕೇಳಿದಾಗ ನೀವೇ ಅಂಗಶೋಧನೆ ಮಾಡಬಹುದು ಎಂದು ಆ ವ್ಯಕ್ತಿ ಹೇಳಿದನು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮಾನ್ಯ ಸರ್ಕಾರಿ ಅಭಿಯೋಜಕರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿ.28.08.2025 ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

5. ನಾನು ಅಮ್ಜದ್ ಖಾನ್ ರವರ ಅಂಗಶೋಧನೆಯನ್ನು ಮಾಡಿದ್ದೇನೆ. ಆ ದಿನ ಅಂಗಶೋಧನೆ ಮಾಡಿದ ಅಂಗಶೋಧನೆ ಜ್ಞಾಪನ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ10 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ10(ಎ) ಎಂದು ಗುರುತಿಸಲಾಯಿತು. (ಈ ದಾಖಲೆಯನ್ನು ದಿ.02.07.2025 ರಂದು ಪೋಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆಂದು ಆರೋಪಿತರ ಪರ ವಕೀಲರು ಹೇಳಿರುತ್ತಾರೆ).ನಾನು ಅಂಗಶೋಧನೆ ಮಾಡಿದಾಗ ಆರೋಪಿ ಅಮ್ಜದ್ ಖಾನ್ ಕೈಯಲ್ಲಿ ಒಂದು ಕವರಿತ್ತು. ಅದನ್ನು ಹಾಜರು ಮಾಡಿದರು. ಆ ಕವರನ್ನು ತೆರೆದಾಗ ಅರ್ಧಂಬರ್ಧ ಒಣಗಿದ ಸೊಪ್ಪು, ಕಡ್ಡಿ, ಹೂವು, ಮೊಗ್ಗು ಇದ್ದವು. ಅದರ ವಾಸನೆಯಿಂದ ಗಾಂಜಾ ಸೊಪ್ಪು, ಕಡ್ಡಿ, ಹೂವು, ಮೊಗ್ಗು ಎಂದು ಪೋಲೀಸರು ಖಾತ್ರಿಪಡಿಸಿಕೊಂಡರು. ಅದನ್ನು ಅಳತೆ ಮತ್ತು ಮಾಪನ ಶಾಸ್ತ್ರ ಇಲಾಖೆಯ ರವೀಶ್ ರವರು ತಂದಿದ್ದ ಡಿಜಿಟಲ್ ಮಾಪನ ಯಂತ್ರದಿಂದ ತೂಕ ಮಾಡಿದರು. ತೂಕ ಮಾಡಿದಾಗ ಅದರ ತೂಕ 400 ಗ್ರಾಂ ಬಂತು. ಬಿಳಿ ಬಟ್ಟೆ ಚೀಲದಲ್ಲಿ ಅದನ್ನು ಹಾಕಿ, ಹೊಲೆದು, C ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಿದರು. ಆ ಸಮಯದಲ್ಲಿ ಪೋಲೀಸರು ಮಾಡಿದ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ2 ಎಂದು ಗುರುತಿಸಲಾಗಿದ್ದು, ಆ ನಿಶಾನೆ ಪಿ2 ಮಹಜರಿನಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ2(ಬಿ) ಎಂದು ಗುರುತಿಸಲಾಯಿತು.

6. ಪೋಲೀಸರು ಆರೋಪಿ ಅಮ್ಜದ್ ಖಾನ್ ನನ್ನು ಗಾಂಜಾವನ್ನು ಎಲ್ಲಿಂದ ತಂದೆ ಎಂದು ವಿಚಾರ ಮಾಡಿದಾಗ ಬೇವಿನಹಳ್ಳಿ ಪಾಳ್ಯ ಕ್ರಾಸ್ ನ ನಾರಾಯಣಪ್ಪ ನವರು ಮಾರಾಟ ಮಾಡಿದ್ದರು ಎಂದು ಹೇಳಿದರು. ನಾರಾಯಣಪ್ಪನವರನ್ನು ತೋರಿಸಿ ಎಂದು ಆರೋಪಿ ಅಮ್ಜದ್ ಖಾನ್ ರವರನ್ನು ಪೋಲೀಸರು ಕೇಳಿದರು. ನಂತರ ಉರ್ಡಿಗೆರೆಯಿಂದ 1 ಕಿ ಮೀ ದೂರದಲ್ಲಿರುವ ಬೇವಿನಹಳ್ಳಿ ಪಾಳ್ಯ ಕ್ರಾಸ್ ಗೆ ಆರೋಪಿ ಅಮ್ಜದ್ ಖಾನ್ ನಮ್ಮನ್ನು ಕರೆದುಕೊಂಡು ಹೋದರು. ಬೇವಿನ ಹಳ್ಳಿ ಪಾಳ್ಯ ಕ್ರಾಸ್ ಗೆ ಹೋಗಿ ಜೀಪನ್ನು ನಿಲ್ಲಿಸಲು ಅಮ್ಜದ್ ಖಾನ್ ಹೇಳಿದರು. ಅಲ್ಲಿಂದ 20 ಅಡಿ ದೂರ ಕರೆದುಕೊಂಡು ಹೋದರು. ಅಲ್ಲಿ ಹೋದಾಗ ಒಂದು

ಮನೆ ಇತ್ತು, ಆ ಮನೆ ಪಕ್ಕದಲ್ಲಿ ನಿಂತಿದ್ದ ವ್ಯಕ್ತಿಯನ್ನು ತೋರಿಸಿ ಇವನೇ ನಾರಾಯಣಪ್ಪ ಎಂದು ಅಮ್ಜದ್ ಖಾನ್ ಹೇಳಿದರು. ನಾರಾಯಣಪ್ಪನನ್ನು ವಿಚಾರಿಸಿದಾಗ ನಾನೇ ಗಾಂಜಾವನ್ನು ಅಮ್ಜದ್ ಖಾನ್ ಗೆ ಮಾರಾಟ ಮಾಡಿದ್ದೇನೆಂದು ನಾರಾಯಣಪ್ಪ ಹೇಳಿದರು. ನಂತರ ನಾನು ನಾರಾಯಣಪ್ಪನ ಅಂಗಶೋಧನೆ ಮಾಡುವ ಬಗ್ಗೆ ಆತನಿಗೆ ಕೇಳಿದೆನು. ನಾನೇ ಅಂಗಶೋಧನೆ ಮಾಡಲು ಒಪ್ಪಿಗೆ ಇದೆಯೇ ಎಂದು ಕೇಳಿದಾಗ ಆತ ಒಪ್ಪಿಗೆ ಸೂಚಿಸಿದನು. ಆ ಅಂಗಶೋಧನೆ ಜ್ಞಾಪನವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ11 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ11(ಎ) ಎಂದು ಗುರುತಿಸಲಾಯಿತು. (ಈ ದಾಖಲೆಯನ್ನು ದಿ.02.07.2025 ರಂದು ಪೋಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆಂದು ಆರೋಪಿತರ ಪರ ವಕೀಲರು ಹೇಳಿರುತ್ತಾರೆ).

7. ನಂತರ ನಾರಾಯಣಪ್ಪ ತನ್ನ ಮನೆಯ ಹಿತ್ತಲಿಗೆ ಕರೆದುಕೊಂಡು ಹೋಗಿ ಆತನ ತೋಟದಲ್ಲಿದ್ದ ತೆಂಗಿನ ಮರದ ಬುಡದಲ್ಲಿ ಇಟ್ಟಿದ್ದ ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟಿದ್ದ ಗಾಂಜಾವನ್ನು ತೋರಿಸಿದರು. ಅದನ್ನು ಮಾರಾಟ ಮಾಡಲು ಅಲ್ಲಿಟ್ಟುಕೊಂಡಿದ್ದರು. ಆ ಚೀಲವನ್ನು ಬಿಚ್ಚಿ ನೋಡಿದಾಗ ಕಡ್ಡಿ, ಸೊಪ್ಪು, ಮೊಗ್ಗು ಇದ್ದವು. ಅದು ಅರ್ಧಬಂರ್ಧ ಒಣಗಿತ್ತು ಮತ್ತು ಗಾಂಜಾದ ವಾಸನೆ ಬರುತ್ತಿತ್ತು. ಅದನ್ನು ಅಳತೆ ಮತ್ತು ಮಾಪನ ಶಾಸ್ತ್ರ ಇಲಾಖೆಯ ರವೀಶ್ ರವರು ತಂದಿದ್ದ ಡಿಜಿಟಲ್ ಮಾಪನ ಯಂತ್ರದಿಂದ ತೂಕ ಮಾಡಿದರು. ತೂಕ ಮಾಡಿದಾಗ ಅದರ ತೂಕ 2 ಕೆಜಿ 820 ಗ್ರಾಂ ಬಂತು. ಬಿಳಿ ಬಟ್ಟೆ ಚೀಲದಲ್ಲಿ ಅದನ್ನು ಹಾಕಿ, ಹೊಲೆದು, C ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಿದರು. ಆ ಸಮಯದಲ್ಲಿ ಮಾಡಿದ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ3 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ3(ಸಿ) ಎಂದು ಗುರುತಿಸಲಾಯಿತು.

8. ಆತನನ್ನು ವಿಚಾರಣೆ ಮಾಡಿದಾಗ ಅಲ್ಲಿಂದ 500 ಮೀ ದೂರದಲ್ಲಿ ಜೋಳದ ಗಿಡಗಳ ಮಧ್ಯೆ ಲಕ್ಷ್ಮಮ್ಮನ ಹೊಲದಲ್ಲಿ ತಾನೇ ಗಾಂಜಾ ಗಿಡಗಳನ್ನು ಬೆಳೆದಿದ್ದೇನೆಂದು ಹೇಳಿದರು. 15 ದಿನಗಳ ಹಿಂದೆ ಆ ಗಾಂಜಾಗಿಡಗಳನ್ನು ಕಿತ್ತು ತಂದು ಇಟ್ಟಿದ್ದೆ, ಸ್ವಲ್ಪ ಅಮ್ಜದ್ ಖಾನ್ ಗೆ ಮಾರಾಟ ಮಾಡಿದ್ದೆ ಎಂದು ಹೇಳಿದರು. ಆ ಸ್ಥಳದಲ್ಲಿ ಗಾಂಜಾ ಬೆಳೆದ ಜಾಗದಲ್ಲಿ ಇದ್ದಂತಹ ಮಣ್ಣು ಮತ್ತು

ಅದರ ಪಕ್ಕದಲ್ಲಿ ಇದ್ದಂತಹ ಮಣ್ಣನ್ನು ತೆಗೆದು, ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ, ಪ್ಯಾಕ್ ಮಾಡಿ, ಮೊಹರು ಮಾಡಲಾಯಿತು. ಲಕ್ಷ್ಮಮ್ಮನ ಜಾಗದಲ್ಲಿ ಮಾಡಿದ ಮಹಜರಿಗೆ ನಾನು ಸಹಿ ಮಾಡಿದ್ದು, ನನ್ನ ಸಹಿಯನ್ನು ನಿಶಾನೆ ಪಿ3(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ಈಗ ನೋಡುತ್ತಿದ್ದು ಆ ಫೋಟೋಗಳಲ್ಲಿ ನಾನು ಇದ್ದೇನೆ. ಆ ಫೋಟೋಗಳನ್ನು ಈಗಾಗಲೇ ನಿಶಾನೆ ಪಿ4 ರಿಂದ 8 ಎಂದು ಗುರುತಿಸಲಾಗಿದೆ. ಅಮ್ಜದ್ ಖಾನ್ ಮತ್ತು ನಾರಾಯಣಪ್ಪನನ್ನು ಈಗ ನೋಡಿದರೆ ಗುರುತಿಸುತ್ತೇನೆ. ಅವರು ಈಗ ನ್ಯಾಯಾಲಯದ ಮುಂದೆ ಆರೋಪಿಗಳಾಗಿದ್ದಾರೆ. ಆ ದಿನ ತೆಗೆದಂತಹ ಮಣ್ಣನ್ನು ನೋಡಿದರೆ ಗುರುತಿಸುತ್ತೇನೆ. ಸ್ಯಾಂಪಲ್ ಮಣ್ಣು ಮತ್ತು ಸಾದಾ ಮಣ್ಣನ್ನು ಈಗ ಪ್ಯಾಕೇಟ್ ನಲ್ಲಿ ನೋಡಿ ಗುರುತಿಸುತ್ತೇನೆ. ಆ ಪ್ಯಾಕೇಟ್ ಗಳ ಮೇಲೆ ಅಂಟಿಸಿದ ಚೀಟಿಗಳಲ್ಲಿ ನನ್ನ ಸಹಿಗಳು ಇವೆ. ಅವುಗಳನ್ನು ಈಗಾಗಾಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್, ವಕೀಲರಿಂದ 1 ನೇ ಆರೋಪಿತನ ಪರವಾಗಿಃ**

9. ದಿ.19.09.2020 ರಂದು ನಾನು ಕಚೇರಿಗೆ ಹೋದಾಗ ನನ್ನ ಮೇಲಧಿಕಾರಿಗಳು ಬೆಳಿಗ್ಗೆ 10.15 ಗಂಟೆಗೆ ಗಾಂಜಾ ಪ್ರಕರಣದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಹೋಗಬೇಕೆಂದು ಜ್ಞಾಪನವನ್ನು ಕೊಟ್ಟರು. ನಾನು ಕಚೇರಿಯಿಂದ ಸಿಇಎನ್ ಪೋಲೀಸ್ ಠಾಣೆಗೆ 10 ನಿಮಿಷದಲ್ಲಿ ಹೋದೆನು. ಸಿಇಎನ್ ಪೋಲೀಸ್ ಠಾಣೆಯಲ್ಲಿ ಪಿಎಸ್ಐ ಮತ್ತು ಪೋಲೀಸರು ಇದ್ದರು. ದೂರನ್ನು ನಾಗರಾಜು ಎಂಬುವವರು ಕೊಟ್ಟಿದ್ದಾರೆಂದು ಗೊತ್ತಾಯಿತು. ಬೆಳಿಗ್ಗೆ 11.15 ಗಂಟೆಗೆ ಪೋಲೀಸ್ ಠಾಣೆಯಿಂದ ಹೊರಟೆವು. ನಾನು, ಪಿಎಸ್ಐ ಶಮೀನ್, ಇಬ್ಬರು ಪೋಲೀಸರು, ಅಳತೆ ಮತ್ತು ಮಾಪನ ಇಲಾಖೆಯ ರವೀಶ್, ಪೋಲೀಸ್ ಠಾಣೆಯಿಂದ ಹೊರಟೆವು. ತುಮಕೂರಿನಿಂದ ಉರ್ಡಿಗೆರೆ 20 ಕಿ ಮೀ ದೂರವಾಗುತ್ತದೆ ಎಂದರೆ ಸರಿಯಲ್ಲ. 15 ಕಿ ಮೀ ಆಗುತ್ತದೆ. ಅಲ್ಲಿಗೆ ಹೋಗಬೇಕಾದರೆ ಮುಕ್ಕಾಲು ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ಅರ್ಧ ಗಂಟೆ ಬೇಕಾಗುತ್ತದೆ. ಅಲ್ಲಿಗೆ ಹೋದಾಗ 11.15 ಗಂಟೆ ಆಗಿತ್ತು. ಉರ್ಡಿಗೆರೆ ಅಮ್ಜದ್ ಖಾನ್ ರವರ ಮನೆಗೆ ಹೋದೆವು. ಅಲ್ಲಿಗೆ ಹೋದಾಗ ನಾಗರಾಜು

ಪೋಲೀಸರು ಅಮ್ಜದ್ ಖಾನ್ ನನ್ನು ಹಿಡಿದುಕೊಂಡಿದ್ದರು. ಆ ಓಣಿಯಲ್ಲಿ 4-5 ಜನ ನಿಂತುಕೊಳ್ಳಬಹುದು. ಅಮ್ಜದ್ ಖಾನ್ ಕಂಕುಳಲ್ಲಿ ಕವರು ಇಟ್ಟುಕೊಂಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತ ಬಿಳಿ ಕವರನ್ನು ಇಟ್ಟುಕೊಂಡಿದ್ದನು. ನಿಶಾನೆ ಪಿ10 ರಲ್ಲಿ ಆರೋಪಿಯ ಸಹಿ ಇಲ್ಲ. ನಿಶಾನೆ ಪಿ10 ಕ್ಕೆ ಇತ್ತೀಚೆಗೆ ಪೋಲಿಸರು ಕರೆಸಿ ನನ್ನ ಸಹಿ ಮಾಡಿಸಿಕೊಂಡರು ಎಂದರೆ ಸರಿಯಲ್ಲ. ಅದೇ ದಿನ ಮಾಡಿದ್ದರೆ ಆರೋಪಿಯ ಸಹಿ ಮತ್ತು ಸಾಕ್ಷಿದಾರರ ಸಹಿ ಇರುತ್ತಿತ್ತು ಎಂದರೆ ಸರಿಯಲ್ಲ. ನಿಶಾನೆ ಪಿ10 ನ್ನು ಪೋಲೀಸರ ಜೊತೆಗೆ ಶಾಮೀಲಾಗಿ ಬನಾವಟ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಸ್ಥಳದಲ್ಲೇ ಟೈಪ್ ಮಾಡಿದರು. ರವೀಶ್ ರವರು ತಂದಿದ್ದ ಡಿಜಿಟಲ್ ತೂಕದ ಯಂತ್ರ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ. ಸಾಯಂಕಾಲ ನಾರಾಯಣಪ್ಪನ ಮನೆಗೆ ಹೋದಾಗ ಆತ ಮನೆಯ ಹೊರಗಡೆ ನಿಂತಿದ್ದ. ಅಮ್ಜದ್ ಖಾನ್ ನಿಂದ ಗಾಂಜಾ ಅಮಾನತ್ತುಪಡಿಸಿಕೊಂಡು ಮಹಜರ್ ಮಾಡಿದಾಗ ಬೆಳಿಗ್ಗೆ 11-15 -12.15 ಗಂಟೆ ಆಗಿತ್ತು. ಮಹಜರ್ ಮಾಡಿ ವಶಪಡಿಸಿಕೊಂಡ ನಂತರ ಆರೋಪಿಯನ್ನು ವಿಚಾರಣೆ ಮಾಡಿದ್ದೇವೆ. ನಾರಾಯಣಪ್ಪನಿಂದ ಗಾಂಜಾ ತಂದಿದ್ದೇನೆ ಎಂದು ಅಮ್ಜದ್ ಖಾನ್ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಮ್ಜದ್ ಖಾನ್ ಮನೆ ಮುಂದೆ ಮಾಡಿದ ಮಹಜರ್ ಜಾಗದ ಚಕ್ಕುಬಂದಿ ಹೇಳಲಾಗುವುದಿಲ್ಲ.

10. ಮಧ್ಯಾಹ್ನ 12.15 ಗಂಟೆಗೆ ಬಿಟ್ಟು 1.00 ಗಂಟೆಗೆ ನಾರಾಯಣಪ್ಪನ ಮನೆಗೆ ಹೋದೆವು. ನಾರಾಯಣಪ್ಪ ಬೇವಿನಹಳ್ಳಿ ಪಾಳ್ಯದಲ್ಲಿ ವಾಸ ಮಾಡುತ್ತಿದ್ದಾನೆ ಎಂದು ಅಮ್ಜದ್ ಖಾನ್ ನನ್ನ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಮ್ಜದ್ ಖಾನ್ ನಿಂದ ಯಾವುದೇ ಗಾಂಜಾ ಅಮಾನತ್ತುಪಡಿಸಿಕೊಂಡಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಮ್ಜದ್ ಖಾನ್ ಬಳಿ 400 ಗ್ರಾಂ ಗಾಂಜಾ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಮ್ಜದ್ ಖಾನ್ ನ್ನು ಇವತ್ತೇ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾರಾಯಣಪ್ಪನ ಮನೆಯನ್ನು ಅಮ್ಜದ್ ಖಾನ್ ತೋರಿಸಿ ಇದೇ ನಾರಾಯಣಪ್ಪನ ಮನೆ ಎಂದು ಹೇಳಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾರಾಯಣಪ್ಪನಿಂದ ಗಾಂಜಾ ಖರೀದಿ ಮಾಡಿದ್ದೇನೆ ಎಂದು ಅಮ್ಜದ್ ಖಾನ್ ಹೇಳಿಲ್ಲ ಎಂದರೆ ಸರಿಯಲ್ಲ. ಠಾಣೆಗೆ ಬಂದು ಹೇಳಿಕೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ.ಹೆಚ್.ವಿ.ರಂಗನಾಥ ರೆಡ್ಡಿ, ವಕೀಲರಿಂದ 2 ನೇ ಆರೋಪಿತನ ಪರವಾಗಿಃ</u>**

11. ನಾನು ಸಿಇಎನ್ ಪೋಲೀಸ್ ಠಾಣೆಗೆ ಹೋಗಿದ್ದಾಗ ಒಬ್ಬನೇ ಆರೋಪಿಯನ್ನು ಹಿಡಿದಿದ್ದೇವೆ ಎಂದು ಪೋಲೀಸರು ಹೇಳಿದರು. ನಾನು ಈ ಪ್ರಕರಣಕ್ಕಿಂತ ಹಿಂದೆ ಒಂದು ಪ್ರಕರಣದಲ್ಲಿ ಸಾಕ್ಷಿ ಹೇಳಿದ್ದೇನೆ. ಅಮ್ಜದ್ ಖಾನ್ ಮನೆಯ ಅಕ್ಕಪಕ್ಕ ಮನೆಗಳಿದ್ದವು. ನಾವು ಪೋಲೀಸರ ಜೊತೆಗೆ ಅಮ್ಜದ್ ಖಾನ್ ಮನೆ ಹತ್ತಿರ ಹೋದಾಗ ಅಕ್ಕಪಕ್ಕದವರು ಸ್ವಲ್ಪ ದೂರದಲ್ಲಿ ನಿಂತಿದ್ದರು. ಸುಮಾರು 15 ಜನ ಇದ್ದರು ಎಂದರೆ 10 ಜನ ಇದ್ದರೆಂದು ಸಾಕ್ಷಿ ಹೇಳುತ್ತಾರೆ. ನಾವು ಏಕೆ ಬಂದಿದ್ದೀವಿ ಎಂದು ಅಲ್ಲಿ ಸೇರಿದ ಜನರಿಗೆ ಗೊತ್ತಾಯಿತು. ಆ ದಿನ ಅಮ್ಜದ್ ಖಾನ್ ನನ್ನು ವಿಚಾರಿಸಿದಾಗ ನಾರಾಯಣಪ್ಪನಿಂದ ಗಾಂಜಾ ಖರೀದಿ ಮಾಡಿದ್ದೇನೆ, ಕರೆದುಕೊಂಡು ಹೋದರೆ ತೋರಿಸುತ್ತೇನೆಂದು ಪೋಲೀಸರ ಮುಂದೆ ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅಮ್ಜದ್ ಖಾನ್ ಮನೆಯಿಂದ ನಾರಾಯಣಪ್ಪನ ಮನೆಗೆ ಹೋದಾಗ ಊರಿನ ಜನ ನಮ್ಮನ್ನು ಹಿಂಬಾಲಿಸಿಕೊಂಡು ಬಂದರು ಎಂದರೆ ಸರಿಯಲ್ಲ. ಉರ್ಡಿಗೆರೆ ಹಳ್ಳಿ ಪ್ರದೇಶ. ಪೋಲೀಸರು ಬಂದಾಗ ಜನ ಕುತೂಹಲದಿಂದ ನೋಡುತ್ತಾರೆ ಎಂದರೆ ನಿಜ. ಆ ದಿನ ನಾವು ಅಮ್ಜದ್ ಖಾನ್ ಮನೆಗೆ ಹೋಗಿಲ್ಲ, ನನ್ನ ಜೊತೆ ಬಂದರೆ ನಾರಾಯಣಪ್ಪನ ಮನೆ ತೋರಿಸುತ್ತೇನೆಂದು ಹೇಳಿಲ್ಲ ಎಂದರೆ ಸರಿಯಲ್ಲ.

12. ನಾರಾಯಣಪ್ಪನ ಮನೆ ಮುಂದೆ ಗೇಟ್ ಇರಲಿಲ್ಲ. ನಾರಾಯಣಪ್ಪನ ಮನೆಯಲ್ಲಿ 3 ಜನ ಇದ್ದರು. ಅದು ತೋಟದ ಮನೆ. ಅದು ಹೊಲ. ನಾರಾಯಣಪ್ಪನ ಮನೆ ಶೀಟ್ ಹಾಕಿದ ಮನೆ. ನಾರಾಯಣಪ್ಪನ ಮನೆಗೆ ಎಷ್ಟು ಬಾಗಿಲುಗಳು ಇವೆ ಮತ್ತು ಕಿಟಕಿಗಳು ಇವೆ ಎಂದು ಗೊತ್ತಿಲ್ಲ. ಅಂಗಶೋಧನೆ ಮಾಡಿದಾಗ ಸೊಪ್ಪು ಸಿಕ್ಕಿತು. ಅದನ್ನು ತೋಟದ ಹಿಂದೆ ಕರೆದುಕೊಂಡು ಹೋಗಿ ತೋರಿಸಿದರು. ಈ ಹಿಂದೆ ನಾನು ದಾಳಿಗೆ ಹೋದಾಗ ಅಂಗಶೋಧನೆ ಮಾಡಿ ಸಹಿ ತೆಗೆದುಕೊಂಡಿದ್ದೇನೆ. ಈ ಪ್ರಕರಣದಲ್ಲಿ ಅಂಗಶೋಧನೆ ಜ್ಞಾಪನದಲ್ಲಿ ಆರೋಪಿ ನಾರಾಯಣಪ್ಪನ ಸಹಿ ಇಲ್ಲ. ಇತ್ತೀಚೆಗೆ ಪೋಲೀಸರು ನನ್ನನ್ನು ಕರೆಸಿ, ನಿಶಾನೆ ಪಿ11 ನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

13. ನಾರಾಯಣಪ್ಪನ ಮನೆ ಸುತ್ತ ತೆಂಗಿನ ಮರಗಳು ಇದ್ದವು, ಎಷ್ಟು ಇದ್ದವು ಎಂದು ಲೆಕ್ಕ ಮಾಡಿಲ್ಲ. ಮನೆಯ ಹಿತ್ತಲಿನಲ್ಲಿ ತೆಂಗಿನ ಮರದ ಬುಡದಲ್ಲಿ ಗಾಂಜಾ ಇರುವ ಪ್ಯಾಕೇಟ್ ಇತ್ತು. ನಾರಾಯಣಪ್ಪನ ಮನೆಗೆ ದಾರಿಯಲ್ಲಿ ಹೋಗುವಾಗ ಅವರ ಮನೆ ಮತ್ತು ಮರ ಕಾಣಿಸುತ್ತದೆ ಎಂದರೆ ನಿಜ. ಮರದ ಬುಡದಲ್ಲಿ ಇಟ್ಟಿತ್ತು ಎನ್ನಲಾದ ವಸ್ತುವಿನ ಫೋಟೋವನ್ನು ಪೋಲೀಸರು ತೆಗೆದರೇ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಫೋಟೋಗಳಲ್ಲಿ ಮರದ ಬುಡದಲ್ಲಿ ಇದೆ ಎನ್ನಲಾದ ವಸ್ತುವಿನ ಫೋಟೋ ಇಲ್ಲ. ನಾನು ಮತ್ತು ಪೋಲೀಸರು ಆ ವಸ್ತುಗಳನ್ನು ಕೊಂಡು ಹೋಗಿ ಅಲ್ಲಿಟ್ಟು ನಿಶಾನೆ ಪಿ4 ರಿಂದ 8 ಫೋಟೋಗಳನ್ನು ತೆಗೆದಿದ್ದೇವೆ ಎಂದರೆ ಸರಿಯಲ್ಲ. ಗಾಂಜಾವನ್ನು ಬುಡದಿಂದ ತೆಗೆದು, ಅದನ್ನು ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10 ದಿನಗಳ ಹಿಂದೆ ಅದನ್ನು ತಂದು ಮರದ ಬುಡದಲ್ಲಿಟ್ಟಿದ್ದೆ ಎಂದು ನಾರಾಯಣಪ್ಪ ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾರಾಯಣಪ್ಪನ ತಂದೆಯ ಹೆಸರು ಗೊತ್ತಿಲ್ಲ. ನಾರಾಯಣಪ್ಪನ ತೋಟದಲ್ಲಿ 2 ಕೆಜಿ 820 ಗ್ರಾಂ ಗಾಂಜಾ ಇರಲಿಲ್ಲ ಎಂದರೆ ಸರಿಯಲ್ಲ.

14. ಲಕ್ಷ್ಮಮ್ಮನ ಹೊಲದ ಸರ್ವೆ ನಂಬರ್ ಗೊತ್ತಿಲ್ಲ. ನಾರಾಯಣಪ್ಪನ ಮನೆಯ ಚಕ್ಕುಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಜಮೀನು, ಪಶ್ಚಿಮಕ್ಕೆ ಕೊರಟಗೆರೆ ರಸ್ತೆ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಜಮೀನು, ಯಾರ ಜಮೀನು ಎಂದು ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಆದ್ದರಿಂದ ಸುತ್ತಮುತ್ತ ಯಾರಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಮ್ಮನ ತೋಟದಲ್ಲಿ ಜೋಳ ಬೆಳೆದಿದ್ದರು, ಅದರ ನಡುವೆ ಗಾಂಜಾ ಬೆಳೆದಿದ್ದರು. ಆ ಸ್ಥಳದಲ್ಲಿ ಗಾಂಜಾ ಗಿಡ ಕಿತ್ತ ಕುರುಹುಗಳು ಇದ್ದವು. ಅದರ ಫೋಟೋ ತೆಗೆದಿದ್ದಾರೋ ಗೊತ್ತಿಲ್ಲ. ಅದರ ಚಕ್ಕುಬಂದಿ ಈಗ ಮರೆತಿದ್ದೇನೆ. ಅಲ್ಲಿದ್ದ ಜೋಳದ ಗಿಡ ಎರಡು ತಿಂಗಳದ್ದಾಗಿತ್ತು. ಆ ಜಾಗ ಜನರಿಗೆ ಕಾಣುವಂತಹ ಜಾಗ. ಲಕ್ಷ್ಮಮ್ಮನ ಹೊಲದಲ್ಲಿ ಗಾಂಜಾ ಬೆಳೆದಿದ್ದೇನೆ ಎಂದು ನಾರಾಯಣಪ್ಪ ಹೇಳಿಲ್ಲ, ಅಲ್ಲಿಗೆ ನಮ್ಮನ್ನು ಕರೆದುಕೊಂಡು ಹೋಗಿಲ್ಲ, ಅಲ್ಲಿ ಯಾವುದೇ ಗಾಂಜಾ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಅಲ್ಲಿಗೆ ಹೋಗಿಲ್ಲ, ಯಾವುದೇ ಮಣ್ಣನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ಪ್ಯಾಕೇಟ್ ನಲ್ಲಿರುವ

ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾನು ದಿ.19.09.2020 ರಂದು ನಾರಾಯಣಪ್ಪನ ಮನೆ ಹತ್ತಿರ ಹೇಳಿಕೆ ಕೊಟ್ಟಿದ್ದೇನೆ. ಆ ಹೇಳಿಕೆಯನ್ನು ಲ್ಯಾಪ್ ಟಾಪಿನಲ್ಲಿ ಟೈಪು ಮಾಡಿದರು. ಆರೋಪಿ ಯಾವುದೇ ತಪ್ಪು ಮಾಡಿಲ್ಲ, ಪೋಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು